ಶ್ರೀ ಬಿ. ಬಸವಲಿಂಗಪ್ಪ : ಅವರು ಹೇಳಿದ್ದೆಲ್ಲಾ ನಿಜ. ಅದು ಅಂಗಡಿಯಲ್ಲಿ ದೊರೆಯುತ್ತದೆ. ಎಂದು ನಾನು ಹೇಳಿದ್ದೇನೆ. ಲಸಿಕೆಯನ್ನು ಕೊಂಡುಕೊಂಡು ತಂದರೆ ಇಂಜಕ್ಷನ್ ಕೊಡಲಿಕ್ಕೆ ನಾವು ತಯಾರಾಗಿದ್ದೇವೆ ಎಂದು ಆಗಲೇ ನಾನು ಹೇಳಿದ್ದೇನೆ. ಇದನ್ನು ಕೆ.ಎಂ.ಎಫ್. ನವರು ಕೂಡ ಮಾಡುತ್ತಿದ್ದಾರೆ. ಅವರು ಸಬ್‌ಸಿಡೈಸ್ಡ್ ರೇಟ್‌ನಲ್ಲಿ ನಾಲ್ಕು ರೂಪಾಯಿಗೆ ತಂದು ಕೊಡುತ್ತಾರೆ. ಅದನ್ನು ಅಭಿವೃದ್ಧಿ ಮಾಡಬೇಕು ಎಂದು ಹೇಳಿದರೆ ಅದನ್ನು ಯೋಚನೆ ಮಾಡೋಣ.

ಶ್ರೀ ಸಿ. ಬೈರೇಗೌಡ: ಇದು ಒಂದು ಸಾಂಕ್ರಾಮಿಕ ರೋಗ. ಬೇಸಿಗೆ ಕಾಲದಲ್ಲಿ ಇದು ಬರುತ್ತದೆ. ದನಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ. ಸಾಂಕ್ರಾಮಿಕ ರೋಗ ಬಂದಾಗ ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿದ ಹಾಗೆ ಅವು ಹಸುಗಳಾಗಲಿ ಅಥವಾ ಎತ್ತಾಗಲೀ ಸಂಪೂರ್ಣವಾಗಿ ಕೆಲಸಕ್ಕೆ ಬರದ ಹಾಗೆ ಆಗುತ್ತದೆ. ಹಸು ಹಾಲು ಕೊಡುವುದಿಲ್ಲ, ಎತ್ತು ಉಳುವುದಕ್ಕೂ ಬರುವುದಿಲ್ಲ. ನಮ್ಮ ಮಾನ್ಯ ಸದಸ್ಯರು ಹೇಳಿದ ಹಾಗೆ ಪ್ರಾಣಿಗಳ ಮೇಲೆ ದಯೆ ತೋರಿ ಅವುಗಳನ್ನು ಸಾಕಬೇಕಾಗುತ್ತದೆ. ಅಂಥ ಪರಿಸ್ಥಿತಿ ಇರುವುದರಿಂದ ಸರ್ಕಾರದಿಂದ ಅದಕ್ಕೆ ನೀವು ಕೊನೆಯ ಪಕ್ಷ ಸಣ್ಣ ರೈತರಿಗೆ ಮತ್ತು ಅತಿ ಸಣ್ಣ ರೈತರಿಗೆ ಮತ್ತು ನಿಮ್ಮ ವರ್ಗದವರಿಗಾದರೂ ಕೂಡಾ ಸರ್ಕಾರದಿಂದ ಲಸಿಕೆಯನ್ನು ತರಿಸಿ ಕೊಡತಕ್ಕಂಥ ವಿಷ್ಯಾಡನ್ನು ದಯವಿಟ್ಟು ಸರ್ಕರದವರು ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ : ಆಲೋಚನೆ ಮಾಡುತ್ತೇನೆ.

ಕನಕಪುರ ತಾಲ್ಲೂಕು ಮತ್ತು ಸಾತನೂರು ಕ್ಷೇತ್ರದ ವ್ಯಾಪ್ತಿಯಲ್ಲಿರುವ ನಿವೇಶನ ರಹಿತ ಬಡ ಜನರಿಗೆ ನಿವೇಶನಗಳ ಹಂಚಿಕೆ

405 - ಶ್ರೀ ಡಿ.ಕೆ ಶಿವಕುಮಾರ್ (ಸಾತನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕನಕಪುರ ತಾಲ್ಲೂಕು ಮತ್ತು ಸಾತನೂರು ಕ್ಷೇತ್ರದ ವ್ಯಾಪ್ತಿಯ ಯಾವ ಯಾವ ಗ್ರಾಮಗಳಲ್ಲಿ ನಿವೇಶನ ಹಂಚಲು ಸರ್ಕಾರ ಕ್ರಮ ಕೈಗೊಂಡಿದೆ.*
2) *ಹಾಗಿದ್ದಲ್ಲಿ ಯಾವ ಯಾವ ಗ್ರಾಮದಲ್ಲಿ ನಿವೇಶನ ಹಂಚಲು ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಇದೆ.*
3) *ತಡೆಯಾಜ್ಞೆ ಇರುವ ಗ್ರಾಮಗಳ ತಡೆ ಯಾಜ್ಞೆಯನ್ನು ತೆರವು ಮಾಡಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ*
4) *ಹಾಗಿದ್ದಲ್ಲಿ ಯಾವ ಯಾವ ಗ್ರಾಮಗಳು ತಡೆಯಾಜ್ಞೆ ತೆರವು ಮಾಡಲು ಕ್ರಮ ಕೈಗೊಳ್ಳಲಾಗಿದೆ:*
5) *ಕನಕಪುರ ಮತ್ತು ಸಾತನೂರು ಕ್ಷೇತ್ರದ ವ್ಯಾಪ್ತಿಯ ಯಾವ ಯಾವ ಗ್ರಾಮಗಳಲ್ಲಿ ನಿವೇಶನ ರಹಿತ ಬಡವರಿಗೆ ನಿವೇಶನ ಹಂಚಲು ಕ್ರಮ ಸಿದ್ಧವಾಗಿದೆ?*

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕನಕಪುರ ತಾಲ್ಲೂಕಿನಲ್ಲಿ ನಲ್ಲಹಳ್ಳಿ ಉಯ್ಯಂಬಳ್ಳಿ ಅನುಮಾನಹಳ್ಳಿ, ಅಚ್ಚಲು, ದಿಂಬದಹಳ್ಳಿ, ಅಗ್ರಹಾರ, ಹಾರೋಹಳ್ಳಿ, ನಾರಸನಕೋಟೆ, ತಟ್ಟೆಕೆರೆ, ಹುಲುಗೊಂಡನಹಳ್ಳಿ ತೋಟನಹಳ್ಳಿ, ಅರೇಕೊಪ್ಪ, ಅರಳಾಳುಸಂದ್ರ ಹಲಸೂರು, ಶಿವನಹಳ್ಳಿ, ದೊಡ್ಡ ಮರಳವಾಡಿ, ಹೊಸದುರ್ಗ ಸೀಗೆಕೋಟೆ, ಬಿಬಳ್ಳಿ, ಬೂವಳ್ಳಿ ಗೋಟೇನಹಳ್ಳಿ, ಬೂದಿಗುಪ್ಪೆ, ಗೇರಹಳ್ಳಿ, ದೊಳ್ಳಹಳ್ಳಿ, ಕಗ್ಗಲಹಳ್ಳಿ ಮುಂತಾದವುಗಳಲ್ಲಿ ಭೂ ಸ್ವಾಧೀನ ಕ್ರಮ ಕೈಗೊಂಡಿದೆ.

ಸಾತನೂರು ಹೋಬಳಿಯಲ್ಲಿ

ಅರಳಾಳು ಸಂದ್ರ, ಬೂಹಳ್ಳಿ, ಬೈರಶೆಟ್ಟಿಹಳ್ಳಿ, ಗೇರಹಳ್ಳಿ ತೋಟಿಹಳ್ಳಿ, ಅಚ್ಚಲು, ಹಲಸೂರು, ನಾಗರಸನಕೋಟೆ, ನಲ್ಲಹಳ್ಳಿ, ಹೊಸದುರ್ಗ, ಬೀಮಗೊಂಡನಹಳ್ಳಿ, ತಟ್ಟೆಕೆರೆ.

ಆ) ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಕಡತಗಳು

1) ಅರಣಿಕುಪ್ಪೆ (ಮುನ್ಸಿಫ್ ನ್ಯಾಯಾಲಯ)

2) ಉಡೆದೊಡ್ಡಿ

3) ಕಲ್ಲಹಳ್ಳಿ (ಸಿವಿಲ್ ಜಡ್ಜ್ ನ್ಯಾಯಾಲಯ)

4) ಬರಡನಹಳ್ಳಿ (ಉಚ್ಚ ನ್ಯಾಯಾಲಯ)

5) ಜೀರಣಕುಪ್ಪೆ (ಉಚ್ಚ ನ್ಯಾಯಾಲಯ)

6) ಕೋರಗೊಂಡನ ಹಳ್ಳಿ (ಉಚ್ಚ ನ್ಯಾಯಾಲಯ)

7) ದೇವರಹಳ್ಳಿ (ಉಚ್ಚ ನ್ಯಾಯಾಲಯ)

8) ಬೇಲಿಕೊತ್ತನೂರು (ಉಚ್ಚ ನ್ಯಾಯಾಲಯ)

9) ಮುಲ್ಲಳ್ಳಿ (ಉಚ್ಚ ನ್ಯಾಯಾಲಯ)

10) ಉಯ್ಯಂಬಳ್ಳಿ (ಉಚ್ಚ ನ್ಯಾಯಾಲಯ)

11) ಹೆಗ್ಗನೂರು (ಉಚ್ಚ ನ್ಯಾಯಾಲಯ)

12) ಮಹಿಮನಹಳ್ಳಿ (ಉಚ್ಚ ನ್ಯಾಯಾಲಯ)

13) ಕೋಡಿಹಳ್ಳಿ (ಉಚ್ಚ ನ್ಯಾಯಾಲಯ)

14) ಹೊಸಹಳ್ಳಿ (ಉಚ್ಚ ನ್ಯಾಯಾಲಯ)

ಇ) ಸರ್ಕಾರಿ ವಕೀಲರಿಗೆ ತಡೆಯಾಜ್ಞೆಯನ್ನು ತೆರವು ಮಾಡಲು ಸೂಚಿಸಿದೆ.

ಈ) ಸರ್ಕಾರಿ ವಕೀಲರಿಂದ ವರದಿ ನಿರೀಕ್ಷಿಸಿದೆ.

ಉ) ನಿವೇಶನ ರಹಿತರಿಗೆ ಈ ಕೆಳಕಂಡ ಗ್ರಾಮಗಳಲ್ಲಿ ಉಚಿತ ನಿವೇಶನ ಹಂಚಲು ಸಿದ್ಧವಾಗಿದೆ.

ಕನಕಪುರ ವಿಧಾನ ಸಭಾ ಕ್ಷೇತ್ರ

1)ಚಿಕ್ಕ ಮರಳವಾಡಿ

2)ಯಲವಾಡಿ

3)ತೇರುಬೀದಿ

4)ಅಗ್ರಹಾರ

5)ಬನವಾಸಿ

6)ಗೋದೂರು (ಕಮಲಾಪುರ)

7)ಬಾಡೇದೊಡ್ಡಿ

8)ಚಾಕನಹಳ್ಳಿ (ಗೌಡಹಳ್ಳಿ)

9)ಕೆರಳಾಳುಸಂದ್ರ

10) ಕಲ್ಲನಕುಪ್ಪ

11) ಕಗ್ಗಲ ಹಳ್ಳಿ

12) ಬ್ಯಾಳಾಳು

13)ಮಲ್ಲಪ್ಪನ ಹೊಸಹಳ್ಳಿ

ಸಾತನೂರು ವಿಧಾನ ಸಭಾ ಕ್ಷೇತ್ರ

1) ಕೂತಗಳಿ

2)ಹೂಕುಂದ

3)ಮುಗ್ಗೂರು

4)ಹೊಸ ಕಬ್ಬಾಳು

5)ಗೇರಹಳ್ಳಿ (ಯಲವಳ್ಳಿ)

6)ಇರಲಕೋಡು

7)ಭೂಹಳ್ಳಿ

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ಈಗಾಗಲೇ ಮಾನ್ಯ ಮಂತ್ರಿಗಳು ಇಬ್ಬರು ಮಾನ್ಯ ಸದಸ್ಯರುಗಳಿಗೆ ಉತ್ತರವನ್ನು ನೀಡಿದ್ದಾರೆ. ಯಾವಾಗ ನೋಡಿದರೂ ಕೋರ್ಟು, ಕೋರ್ಟು ಎಂದು ಹೇಳುತ್ತಾರೆ. 1979 ರಿಂದ ಪ್ರಾರಂಭವಾಗಿದ್ದು ಬಹುಶಃ ಕಾಲು ಭಾಗದಷ್ಟು ಕೂಡ ಸೈಟನ್ನು ಬಡವರಿಗೆ ಹಂಚಿಲ್ಲ. ಇಲ್ಲಿ ಉತ್ತರವನ್ನು ಒದಗಿಸಿಕೊಟ್ಟಿರುವುದು ನನಗಂತೂ ಸಮಧಾನಕರವಲ್ಲ, ಇನ್ನು ಇಲ್ಲಿ ಅನೇಕ ಗ್ರಾಮಗಳು ಇವೆ. ಇಲ್ಲಿ ಅವುಗಳು ಬಿಟ್ಟುಹೋಗಿವೆ. ಈ ಸಂದರ್ಭದಲ್ಲಿ ಒಂದು ಮಾತ್ರ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಇಲ್ಲಿ ಬರೀ ಕೋರ್ಟಿನ ಉತ್ತರವನ್ನು ಮಾತ್ರ ಬರೆದಿದ್ದಾರೆ. "ಸರ್ಕಾರಿ ವಕೀಲರಿಗೆ ತಡೆಯಾಜ್ಞೆಯನ್ನು ತೆರವು ಮಾಡಲು ಸೂಚಿಸಿದೆ" ಎಂದು ಹೇಳಿದ್ದಾರೆ. ಆಮೇಲೆ "ನಿವೇಶನ ರಹಿತರಿಗೆ ಈ ಕೆಳಕಂಡ ಗ್ರಾಮಗಳಲ್ಲಿ ಉಚಿತ ನಿವೇಶನ ಹಂಚಲು ಸಿದ್ಧವಾಗಿದೆ" ಎಂದು ಹೇಳಿದ್ದಾರೆ. ಮತ್ತು ಸರ್ಕಾರಿ ವಕೀಲರಿಂದ ವರದಿಯನ್ನು ನಿರೀಕ್ಷಿಸಿದೆ ಎಂದು ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಈ ರೀತಿ ಯಾವ ಸರ್ಕಾರ ಬಂದರೂ ಕೂಡಾ ಇದೇ ಉತ್ತರವನ್ನು ಕೊಟ್ಟು ಕೊಂಡು ಹೋದರೆ ಬಡವರಿಗೆ ಸೈಟುಗಳು ಸಿಗುವುದಿಲ್ಲ, ಇನ್ನು ಹತ್ತು ವರ್ಷ ಅಲ್ಲ, ಇಪ್ಪತ್ತು ವರ್ಷವಾದರೂ ಆಗುವುದಿಲ್ಲ. ಯಾವುದೇ ಸರ್ಕಾರ ಬಂದರೂ ಆರು ತಿಂಗಳಲ್ಲಿ ಮಾಡುತ್ತೇವೆ, ಮೂರು ತಿಂಗಳಲ್ಲಿ ಹಂಚುತ್ತೇವೆ ಎಂದು ಹೇಳುತ್ತಾರೆ. ದಯವಿಟ್ಟು ಸರ್ಕಾರದವರು ಯಾವ ನ್ಯಾಯಾಲಯದಿಂದಲೂ ಅಡ್ಡಿ ಬಾರದಂತೆ ಒಂದು ವಿಶೇಷ ತುರ್ತು ಕಾನೂನನ್ನು ವಿಧಿಸಿ ಭೂಸ್ವಾಧೀನ ಮಾಡಿ ಬಡವರಿಗೆ ಒಂದು ಸೈಟನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡಿದರೆ ಉಪಯೋಗವಾಗುತ್ತದೆ. ದಯವಿಟ್ಟು ಇದರ ಬಗ್ಗೆ ವಿಶೇಷಕಾನೂನನ್ನು ಮಾಡುವುದಕ್ಕೆ ಸರ್ಕಾರದಿಂದ ಏನಾದರೂ ವ್ಯವಸ್ಥೆ ಮಾಡಲಿಕ್ಕೆ ಆಗುತ್ತದೆಯೇ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

12.10 ಪಿ.ಎಂ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಸುಮಾರು 45 ಗ್ರಾಮಗಳಲ್ಲಿ ಭೂಸ್ವಾಧೀನ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸ್ವಾಧೀನ ತೆಗೆದುಕೊಳ್ಳುವುದರಲ್ಲಿ ತಡವಾಗಿರಬಹುದು. ಶೀಘ್ರವಾಗಿ ಮಾಡಲು ಆದೇಶ ಕೊಡುತ್ತೇನೆ. ಜಾಗ್ರತೆಯಾಗಿ ಈ ಗವರ್ನಮೆಂಟ್ ಜಮೀನು ಏನಿದೆ ಅದನ್ನು ಸ್ವಾಧೀನ ತೆಗೆದುಕೊಂಡು ಸೈಟ್‌ಗಳನ್ನು ಕೊಡುವಂಥ ವ್ಯವಸ್ಥೆ ಮಾಡುತ್ತೇನೆ. ಇನ್ನು ಕೋರ್ಟಿನ ವಿಚಾರದಲ್ಲಿ

ಶ್ರೀಮಾನ್ ಅಂಜನಮೂರ್ತಿಯವರ ಪ್ರಶ್ನೆಗೆ ಉತ್ತರಿಸುವಾಗ ಹೇಳಿದ್ದೇನೆ. ಇದನ್ನು ಜಾಗ್ರತೆಯಾಗಿ ವಿಲೇವಾರಿ ಮಾಡುವುದಕ್ಕೆ ಕೋರ್ಟಿಗೆ ನಾವು ಪ್ರಾರ್ಥನೆ ಮಾಡಿಕೊಳ್ಳಬಹುದಷ್ಟೆ. 1982ನೇ ಇಸವಿಯಿಂದ ಪೆಂಡಿಂಗ್ ಇದೆ. ನಾವು ಇದನ್ನು ಯಾವಾಗ ಮಾಡಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ನಮ್ಮ ಕೆಲಸವನ್ನು ನಾವು ಮಾಡುತ್ತೇವೆ. ಕೋರ್ಟಿನ ಕೆಲಸಕ್ಕಾಗಿ ನಾವು ಪ್ರಾರ್ಥನೆ ಮಾಡಿಕೊಳ್ಳಬೇಕಾಗುತ್ತದೆ. ಇನ್ನು ಎರಡನೆಯದಾಗಿ ಅಕ್ವಿಸಿಷನ್ ಫಾರ್ ಸೈಟ್‌ಲೆಸ್ ಪೀಪಲ್ ಎಂದು. ಒಂದು ವಿಶೇಷವಾದ ಕಾನೂನನ್ನು ಹೊಸದಾಗಿ ಮಾಡಿದ್ದೇವೆ. 90 ದಿವಸದಲ್ಲಿ ಸ್ವಾಧೀನ ತೆಗೆದುಕೊಳ್ಳುತ್ತೇವೆಂದು ಸಹ ಇದೆ. ಇದಕ್ಕೂ ಕೂಡ ಸುಪ್ರೀಮ್ ಕೋರ್ಟಿಗೆ ಹೋಗಿ ತಿದ್ದುಪಡಿ ತಂದಿದ್ದಾರೆ. ಇದಕ್ಕೆ ಪುನಃ ತಿದ್ದುಪಡಿ ತರುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿವೇಶನರಹಿತರಿಗೆ ನಿವೇಶನ ಹಂಚುವುದು 20 ವರ್ಷಗಳಿಂದಲೂ ನಡೆದಿಲ್ಲ, 20 ವರ್ಷಗಳಿಂದ ನಡೆಯದೇ ಇರುವುದರಿಂದ ಇಡೀ ರಾಜ್ಯದಲ್ಲಿ ನಿವೇಶನಕ್ಕಾಗಿ ಎಷ್ಟು ಬೇಡಿಕೆಯಿದೆ ಎಂಬುವುದು ಗೊತ್ತಾಗುತ್ತದೆ. ಇದನ್ನು ನಾವು ಬಹಳ ಬೇಗ ಮಾಡಬೇಕಾಗಿದೆ. ನಿವೇಶನ ಹಂಚುವ ಬಗ್ಗೆ ತರಾತುರಿಯಿಂದ ಕೋರ್ಟ್ ವ್ಯಾಪ್ತಿ ಮೀರಿ ಸ್ಟೇ ಕೊಡದೇ ಇರುವ ರೀತಿಯಲ್ಲಿ ಕಾನೂನು ಅಳವಡಿಸಿ ಕೂಡಲೇ ತುರ್ತಾಗಿ ವ್ಯವಸ್ಥೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಪ್ರಗತಿದಾಯಕವಾದ ಕ್ರಮವಾಗುತ್ತದೆ. ನಿವೇಶನರಹಿತರಿಗೆ ಬರೀ ನಿವೇಶನವಲ್ಲ, ಸ್ಮಶಾನಗಳಿಗೂ ಜಾಗವಿಲ್ಲ, ಅನೇಕ ಹಳ್ಳಿಗಳಲ್ಲಿ ಹೆಣ ಊಳುವುದಕ್ಕೆ ಕೂಡ ಜಾಗವಿಲ್ಲದಂತಾಗಿದೆ. ನನ್ನ ಕ್ಷೇತ್ರದಲ್ಲಿ 45 ಹಳ್ಳಿಗಳಲ್ಲಿ ಸ್ಮಶಾನಕ್ಕೆ ಜಾಗವಿಲ್ಲವೆ ಯಾರಯಾರದೋ ಜಮೀನಿನಲ್ಲಿ ಹೆಣ ಹೂಳುವುದಕ್ಕೆ ಹೋಗಿ ಬಾರಿ ಗಲಾಟೆ ಆಗಿದೆ. ಇಂಥ ಸಾಮನ್ಯ ನ್ಯಾಯ ಒದಗಿಸುವುದಕ್ಕೆ ಕೋರ್ಟು ಏನು ಕ್ರಮವನ್ನು ತೆಗೆದುಕೊಳ್ಳುತ್ತದೆಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿರುವುದು ಶುದ್ಧ ತಪ್ಪೆಂದು ಹೇಳದೇ ಹೋಧರೂ ನಿಜವಲ್ಲವೆಂದು ಹೇಳಬಹುದು. ನಾನು ಅರ್ಬನ್ ಡೆವೆಲಪ್‌ಮೆಂಟ್ ಮಿನಿಸ್ಟರ್ ಆಗಿದ್ದಾಗ 5 ಲಕ್ಷ ಸೈಟುಗಳನ್ನು ವಿತರಣೆ ಮಾಡಿಲಿಲ್ಲವೇ? ಸರ್ಕಾರದ ಜಮೀನು ಮಾಡಿಲ್ಲದೇ ಇರಿವುದರಿಂದ, ಬೇಡಿಕೆ ಹೆಚ್ಚಾಗಿ ಸುಮಾರು 7 ಲಕ್ಷ ಸೈಟ್‌ಗಳು ಬೇಕಾಗಿದೆ. 2-3 ಲಕ್ಷ ಸೈಟುಗಳು ತಯಾರಿದೆ, ಕೊಡುತ್ತೇವೆ. 5 -6 ಲಕ್ಷ ಸೈಟುಗಳನ್ನು ಹಂಚುವ ವ್ಯವಸ್ಥೆ ಮಾಡುತ್ತಿದ್ದೇವೆ, ಇದಕ್ಕಾಗಿ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ಸರ್ಕಾರದಿಂದ ತೀರ್ವತೆಯಿಂದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಜಲ್ಲಾ ಪರಿಷತ್, ಮಂಡಲ್ ಆಕ್ಟ್ ಅದರ ಪ್ರಕಾರ ಮಂಡಲ್ ಪಂಚಾಯತ್‌ರವರಿಗೆ ನಾವು ಸ್ವಲ್ಪ ಜಾಸ್ತಿ ಅಧಿಕಾರ ಕೊಟ್ಟಿದ್ದೇವೆ. ರವಿನ್ಯೂ ಅಧಿಕಾರಿಗಳು ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವಂಥರು. ಅವರು ಹೇಳಿದ ಮೇಲೆ ಅಕ್ವೈರ್ ಮಾಡಿಕೊಳ್ಳಬೇಕು, ಇಲ್ಲದಿದ್ದರೆ ಪಂಚಾಯತಿ ಯಾಗುತ್ತದೆ. ಹಂಚುವಂತಾದ್ದು ಕೂಡ ತಡವಾಗಿದೆ. ಇವೆಲ್ಲಾವನ್ನೂ ಮನಸ್ಸಿನಲ್ಲಿಟ್ಟುಕೊಂಡು ಶೀಘ್ರವಾಗಿ ಪರಿಹಾರವನ್ನು ಕಂಡುಹಿಡಿಯುತ್ತೇವೆ. ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ ಪ್ರಶ್ನೆ ಸಂಖ್ಯೆ 12ಕ್ಕೆ ಟೈಮ್ ಕೇಳಿದ್ದೇವೆ.